O.S. NO. 161/2023

DW - 1 .

Dated 20-01-2026.

ಸಾಕ್ಷಿಯನ್ನು ಈ ದಿನ ದಿನಾಂಕ 20-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ, ಯಾರು ಹಾಜರಾಗದೇ ಇರುವ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ನಾನು 2 ನೇ ತರಗತಿವರೆಗೆ ಶಾಲೆ ಕಲಿತಿದ್ದೇನೆ. ನನಗೆ ಕನ್ನಡ ಓದು ಬರಹ ಬರುವುದಿಲ್ಲ. ಸಹಿ ಮಾಡುತ್ತೇನೆ. ದಾವಾ ಆಸ್ತಿಗಳು 2 ಹೊಲಗಳು ಇದ್ದು ಒಂದು 7 ಎಕರೆ 10 ಗುಂಟೆ ಇನ್ನೊಂದು 2 ಎಕರೆ 28 ಗುಂಟೆ ಇರುತ್ತವೆ. ಪ್ರಸ್ತುತ ದಾವೆಯ ಈ 2 ಆಸ್ತಿ ಹೊರತು ಪಡಿಸಿ ನನ್ನ ಸ್ವಂತ ಆಸ್ತಿ ಸರ್ವೆ ನಂ. 484 ಮತ್ತು 588 ರ ಮೇಲೆ ಮಾಡಿರುತ್ತಾರೆ. ಅವು ಒಂದು 4 ಎಕರೆ 5 ಗುಂಟೆ ಇನ್ನೊಂದು 25 ಗುಂಟೆ ಇದೆ. ಸದರಿ 2 ಹೊಲಗಳನ್ನು ನಾನು ನನ್ನ ಹೆಸರಿಗೆ ಖರೀದಿ ಮಾಡಿರುತ್ತೇನೆ. 1985 ರಲ್ಲಿ ನನ್ನ ಹೆಸರಿಗೆ ಸದರಿ ಈ ಮೆಲಿನ 2 ಹೊಲಗಳನ್ನು ಖರೀದಿ ಆಗಿರುತ್ತವೆ. ಸದರಿ ಜಮಿನುಗಳ ಖರೀದಿ ಪತ್ರಗಳನ್ನು ಪ್ರಸ್ತುತ ದಾವೆಯಲ್ಲಿ ಹಾಜರು ಮಾಡಿರುತ್ತೇನೆ. ಸದರಿ ಈ 2 ಆಸ್ತಿಗಳನ್ನು ರೂ. 95 ಸಾವಿರ ಗಳಿಗೆ ಖರೀದಿ ಮಾಡಿರುತ್ತೇನೆ. 1985 ರಲ್ಲಿ ನನ್ನ ವಯಸ್ಸು 12 ವರ್ಷ ಇತ್ತು. ಆಗ ನಾನು ಶಾಲೆಗೆ ಹೊಗುತ್ತಿದ್ದೆ ಎಂದರೆ ಸಾಕ್ಷಿ ಕಮತ ( ಕೃಷಿ ) ಮಾಡುತ್ತಿದ್ದೆ

ಎಂದು ನುಡಿದಿರುತ್ತಾರೆ. ನನ್ನ 12 ನೇ ವಯಸ್ಸಿನಲ್ಲಿ ಕಮತ (ಕೃಷಿ ) ಮಾಡುವಷ್ಟು ನನ್ನ ಬುದ್ದಿಮಟ್ಟ ಬೆಳೆದಿರಲಿಲ್ಲ ಎಂದರೆ ಸರಿಯಲ್ಲ. ದಾವಾದ 4 ಜಮಿನುಗಳು ನನ್ನ ತಂದೆ ತಾಯಿ ಸೇರಿ ದುಡಿದು ಗಳಿಸಿದ ಆಸ್ತಿ ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅನುಕ್ರಮ ನಂ. 2 ಮತ್ತು 4 ನಾನು ಸ್ವಂತ ಗಳಿಸಿದ ಆಸ್ತಿ ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಹಣವನ್ನು ಮಾರಾಟಗಾರರಿಗೆ ನಾನೇ ಸ್ವತ ಕೊಟ್ಟಿರುತ್ತೇನೆ. ಖರೀದಿ ಕಾಲಕ್ಕೆ ನಮ್ಮ ಕುಟುಂಬಂದ ಹಿರೇತನ ನನ್ನ ತಂದೆ ಮಾಡುತ್ತಿದ್ದರು. ನನ್ನ ತಂದೆ ತನ್ನ ಜೀವಿತ ಅವದಿವರೆಗೆ ಕುಟುಂಬದ ಹಿರೇತನ ಮಾಡಿರುತ್ತಾನೆ. ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 1 ಮತ್ತು 3 ನಮ್ಮ ಪಿತ್ರಾರ್ಜಿತ ಆಸ್ತಿ ಅದರಲ್ಲಿ ನಾನು ಮತ್ತು ನನ್ನ ತಂದೆ ತಾಯಿ, ಸಹೊದರ ಸಹೊರಿಯರು ಕೂಡಿಯೇ ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದೇವು ಎಂದರೆ ಸರಿ. ಸದರಿ ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 1 ಮತ್ತು 3 ಎರಿ ಜಮಿನುಗಳು ಎಂದರೆ ಸಾಕ್ಷಿ ಅದರಲ್ಲಿ ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 1 ಸ್ವಲ್ಪ ಕೆಂಪು ಮಣ್ಣು ಮಿಶ್ರಿತ ಜಮಿನು ಇದೆ ಎಂದು ನುಡಿದಿರುತ್ತಾರೆ. ಸದರಿ ಈ 2 ಜಮಿನುಗಳಲ್ಲಿ ಹೆಸರು, ಕಡಲೆ ಬೆಳೆ ಬೆಳೆಯುತ್ತಿದ್ದೇವು. ಸದರಿ ಹೊಲಗಳಿಂದ ಬಂದ ಉತ್ಪನ್ನ ಉಳಿತಾಯ ಆಗುತ್ತಿರಲಿಲ್ಲ. ಸದರಿ ಜಮಿನುಗಳಲ್ಲಿ ನನ್ನ ತಂದೆ –ತಾಯಿ, ನಾನು ಹಾಗೂ ನನ್ನ ಸಹೊದರ ಸಹೊದರಿಯರು ಎಲ್ಲರು ದುಡಿದು ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 2 ಮತ್ತು 4 ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1996 ರಲ್ಲಿ ನನ್ನ ತಂದೆ ಅಜ್ಞಾನ ಸಂರಕ್ಷಕ ಅಂತಾ ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ

ಸರಿಯಲ್ಲ. 1996 ರಲ್ಲಿ ನನಗೆ 11–12 ವರ್ಷ ಇದ್ದಿರಬಹುದು. ನನಗೆ 1996 ರಲ್ಲಿ 6 ವರ್ಷ ವಯಸ್ಸು ಇತ್ತು ಎಂದರೆ ಸುಳ್ಳು. ನನಗೆ ಆ ಸಮಯದಲ್ಲಿ 6 ವರ್ಷ ವಯಸ್ಸು ಇದ್ದರು ಸಹ 11–12 ವರ್ಷ ವಯಸ್ಸು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ನನ್ನ ವಯಸ್ಸು 38 ಅಂತಾ ಬರೆಸಿರುತ್ತೇನೆ. ಸದರಿ ನನ್ನ ವಯಸ್ಸು ಅಜಮಾಸ ಮೇಲೆ ಬರೆಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ನನ್ನ ವಯಸ್ಸು ಅಜಮಾಸ ಮೇಲೆ ಬರೆಸಿರುತ್ತೇನೆ ಎಂದರೆ ಸರಿ. ಸದರಿ ನನ್ನ ಸಾಕ್ಷಿ ಪ್ರಮಾಣ ಪತ್ರ ನಲ್ಲಿ ವಯಸ್ಸು ಬರೆಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಆಗ ನಾನು ವಕೀಲರಿಗೆ ಶಾಲಾ ದಾಖಲಾತಿ ಪ್ರಮಾಣ ಪತ್ರ ತೋರಿಸಿಲ್ಲ. ಸದರಿ ನಾನು ಹೇಳುತ್ತಿರುವ ಜಮಿನುಗಳ ಮೂಲ ಖರೀದಿ ಪತ್ರ ಹಾಜರು ಮಾಡಿದ್ದೀರಾ ಎಂದರೆ ಅವು ನನ್ನ ತಮ್ಮ 2 ನೇ ಪ್ರತಿವಾದಿ ಹತ್ತಿರ ಉಳಿದಿರುತ್ತವೆ ಎಂದು ನುಡಿದಿರುತ್ತಾರೆ. ನಾನು ಹೇಳುತ್ತಿರುವ ಖರೀದಿ ಕಾಲಕ್ಕೆ ನಾನು ಅಲ್ಪವಹಿ ಇದ್ದು ನನಗೆ ಯಾವುದೇ ದೈಹಿಕ ವಾಗಿ ದುಡಿಯವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಕಾಲಕ್ಕೆ ಮಾರಾಟಗಾರರಿಗೆ ಖರೀದಿ ಹಣ ನಾನೇ ಸ್ವತ ಕೊಟ್ಟಿದ್ದೇನೆ ಎನ್ನುವುದಕ್ಕೆ ದಾಖಲೆ ಹಾಜುರ ಮಾಡಿದ್ದೀರಾ ಎಂದರೆ ಇಲ್ಲ.

ನಮ್ಮ ಊರಿನಲ್ಲಿ ಗೇಟಿ ಮುದಕಪ್ಪ ಮತ್ತು ಫಕಿರಪ್ಪ ಎಂಬುವವರು ಪರಿಚಯ ಇರುತ್ತಾರೆ. ಅದೇ ರೀತಿ ನಮ್ಮ ಊರಿನಲ್ಲಿ ಬಸವರಾಜ ಸೊಪ್ಪಡ್ಲ, ಇಂದ್ರಪ್ಪ ಸೊಪ್ಪಡ್ಲ ಪರಿಚಯ ಇರುತ್ತಾರೆ. ಸದರಿಯವರು ನನಗೆ ಮತ್ತು ನಾನು ಅವರಿಗೆ ಕೃಷಿಯಲ್ಲಿ

ಒಬಬ್ಬರಿಗೆ ಒಬ್ಬರು ಸಹಾಯ ಮಾಡುವವರು ಇರುತ್ತೇವೆ ಎಂದರೆ ಸರಿ. ನನಗೆ ಏನಾದರು ತೊಂದರೆ ಬಂದರೆ - ಮೆಲಿನ 4 ಜನ ನನಗೆ ಸಹಾಯ ಮಾಡುತ್ತಾರೆ ಅವರಿಗೆ ತೊಂದರೆ ಬರಂದರೆ ನಾನು ಸಹಾಯ ಮಾಡುತ್ತೇನೆ ಎಂದರೆ ನಿಜ. ಸದರಿಯವರು ನನಗೆ ಯಾವಾಗಿನಿಂದ ಪರಿಚಯಸ್ಥರು ಎಂದರೆ ಅವರು ನಮ್ಮ ಮನೆತನಕ್ಕೆ ಮೊದಲಿನಿದ ಪರಿಚಯ ಇರುತ್ತಾರೆ. ಸದರಿಯವರ ಸಾಕ್ಷಿ ಮಾಡಿಸಿಬೇಕೆಂಬ ಉದ್ದೇಶದಿಂದ ಅವರ ಖೊಟ್ಟಿ ಉತಾರ ಹಾಜರು ಮಡಿರುತ್ತೇನೆ ಎಂದರೆ ಸುಳ್ಳು. ನನ್ನ ತಾಯಿಯ ತವರು ಮನೆ ಅದೇ ದೊಡ್ಡವಾಡ ಗ್ರಾಮ ಎಂದರೆ ಸರಿ. ನನ್ನ ತಾಯಿಯ ತವರು ಮನೆ ಮೂಲತ ಕೃಷಿಕ ಕುಟುಂಬ ಎಂದರೆ ಸರಿ. ಸದರಿ ನನ್ನ ತಾಯಿಯ ತವರು ಮನೆಯವರು ನಮಗೆ ಪ್ರತಿ ವರ್ಷ ನಮ್ಮ ಕುಟುಂಬಕ್ಕೆ ಸಹಾಯ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. 1996 ರಲ್ಲಿ ರೂ. 95 ಸಾವಿರ ಕೊಟ್ಟು ನನ್ನ ಹೆಸರಿಗೆ ನನ ತಂದೆ ಖರೀದಿ ಮಾಡುವ ಕಾಲಕೆ ನನ್ನ ತಾಯಿಯ ತವರು ಮನೆಯವರು ಆರ್ಥಿಕಾವಾಗಿ ನನ್ನ ತಂದೆಗೆ ಸಹಾಯ ಮಾಡಿದ್ದರು ಎಂದರೆ ಸುಳ್ಳು. ನಮ್ಮ ಮನೆಯಲ್ಲಿ ನಾನೇ ಹಿರಿಯ ಮಗ ಎಂದರೆ ನಿಜ. ನಮ್ಮ ತಂದೆ ಮೃತಪಟ್ಟ ನಂತರ ಮನೆ ಹಿರಿತನ ಮಾಡುತ್ತಾ ಬಂದಿದ್ದೇನೆ. ಈಗಲೂ ಹಿರೇತನ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ 10 ವರ್ಷದಿಂದ ಹಿರೇತನ ಮಾಡುವುದನ್ನು ಬಿಟ್ಟಿದ್ದೇನೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಮೃತಪಟ್ಟು ಈಗ 5-6 ವರ್ಷ ಆಗಿರುತ್ತದೆ. ಹೀಗಾಗಿ ನಾನು 10 ವರ್ಷದಿಂದ ಹಿರೇತನ ಬಿಟ್ಟಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ನನ್ನ ತಾಯಿ ಮತ್ತು ನನ್ನ ಅಕ್ಕ ತಂಗಿಯರು ಸೇರಿ ದಾವಾ ಆಸ್ತಿಗಳಲ್ಲಿ

O.S. NO. 161/2023
DW – 1 .
Dated 20-01-2026.

ವಾಟ್ನಿ ಕೊರಿ ಸಲ್ಲಿಸಿದ್ದಾರೆ ಎಂರದೆ ಸುಳ್ಳು ದಾವೆ ಸಲ್ಲಿಸಿದ್ದಾರೆ. ದಾವಾ ಆಸ್ತಿಗಳ ಪೈಕಿ ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 3 ನನ್ನ ತಾಯಿ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ತಾಯಿ ವಾಟ್ನಿ ಮೂಲಕ 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟರು ಎಂದರೆ ಸರಿಯಲ್ಲ. 2000 ನೇ ಇಸ್ವಿಯಿಂದ 2 ನೇ ಪ್ರತಿವಾದಿ ಹೆಸರಿನಲ್ಲಿ ಸದರಿ ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 3 ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಡೈರಿ ನಂ. 312 ಮುಂಜೂರಾಗಿರುತ್ತದೆ ಎಂದರೆ ಅವರ ಖೊಟ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಡೈರಿ ಖೊಟ್ಟಿ ಇದೆ ಅಂತಾ ನಾನು ಪ್ರಶ್ನಿಸಿ ಮೆಲ್ಮನವಿ ಸಲ್ಲಿಸಿಲ್ಲ. ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 1 ಆಸ್ತಿ ಮೊದಲು ನನ್ನ ತಂದೆ ಹೆಸರಿನಲ್ಲಿ ಇತ್ತು ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ಸದರಿ ಆಸ್ತಿಗೆ ನಮ್ಮ 5 ಜನ ವಾರಸಾದಾರರು ಹೆಸರು ದಾಖಲಾಯಿತು ಎಂದರೆ ಸರಿ. ವಾಟ್ನಿ ಲೇಖಿ ಮೂಲಕ ಆಗಿರುತ್ತದೆ. ಸುಮಾರು 10 ವರ್ಷಗಳ ಹಿಂದೆ ವಾಟ್ನಿ ಆಗಿರುತ್ತದೆ . 10 ವರ್ಷಗಳ ಹಿಂದೆ ನಾನು, ವಾದಿಯರು ಮತ್ತು 1 ನೇ ಪ್ರತಿವಾದಿ ಕೂಡಿಯೇ ಇದ್ದೇವು. 10 ವರ್ಷದ ಹಿಂದೆ ನಾನು ಮತ್ತು ನನ್ನ ತಂದೆ ಕೂಡಿಯೇ ಒಕ್ಕುಲುತನ ಮಾಡುತ್ತಿದ್ದೇವು. ನನ್ನ ಅಕ್ಕ ತಂಗಿಯರ ಮದುವೆ ನಾನು ಮತ್ತು ನನ್ನ ತಂದೆ ಸೇರಿ ಖರ್ಚು ಮಾಡಿ ಮಾಡಿರುತ್ತೇವೆ. 10 ವರ್ಷಗಳ ಹಿಂದೆ ಮದುವೆ ಖರ್ಚಿನ ಸಾಲ ಆಗಲಿ, ಮನೆತನದ ಹಿರೇತನ ಹಾಗೂ ಹಣದ ತಗೆದುಕೊಳ್ಳುವ ವ್ಯವಹಾರ ನಾನು ಮತ್ತು ನನ್ನ ತಂದೆ ಸೇರಿ ಮಾಡುತಿದ್ದೇವು ಎಂದರೆ ಸರಿ. 10 ವರ್ಷಗಳ ಹಿಂದೆ ನಾನು ಮತ್ತು 2ನೇ ಪ್ರತಿವಾದಿ ಮದ್ಯೆ ವಾಟ್ನಿ ಮಾಡಿಕೊಂಡಿರುತ್ತೇವೆ.

ಸದರಿ ವಾಟ್ನಿ ಯಲ್ಲಿ ನನ್ನ ತಾಯಿ ಮತ್ತು ಅಕ್ಕ ತಂಗಿಯರು ಬಾಗ ವಹಿಸಿರುವುದಿಲ್ಲ. ಸದರಿ ವಾಟ್ನಿ ಯಲ್ಲಿ 7 ಎಕರೆ 10 ಗುಂಟೆ ಪೈಕಿ 1 ಎಕರೆ ಕೊಟ್ಟಿದ್ದರು ಮತ್ತು 2 ಎಕರೆ 28 ಗುಂಟೆ ಕೊಟ್ಟಿದ್ದರು. ಒಟ್ಟು 3 ಎಕರೆ 28 ಗುಂಟೆ ಜಮಿನು ನನ್ನ ಹಿಸ್ಸೆಗೆ ಬಂದಿರುತ್ತದೆ. ಇನ್ನುಳಿದ ಜಮಿನು ವಾದಿಯ ಹಿಸ್ಸೆಗೆ ಹೊಗಿರುತ್ತದೆ. ಸದರಿ ವಾಟ್ನಿ ಸ್ಟಾಂಪ ಪೆಪರ ಮೇಲೆ ಆಗಲಿ, ಕಾಗದ ಮೇಲೆ ಆಗಲಿ ಬರೆದಿಲ್ಲ, ಮೌಖಿಕವಾಗಿ ವಾಟ್ನಿ ಮಾಡಿಕೊಂಡಿರುತ್ತೇವೆ. 10 ವರ್ಷದ ಹಿಂದೆ ನನ್ನ ಮತ್ತು ನಮ್ಮ ತಮ್ಮನ ಮದ್ಯೆ ವಾಟ್ನಿ ಆಗಿರುತ್ತದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ನನ್ನ ಹೆಸರಿನಲ್ಲಿ ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 2 ಮತ್ತು 4 ರ ಪಹಣಿ ಪತ್ರಿಕೆ ನನ್ನ ಹೆಸರಿನಲ್ಲಿ ಇರುತ್ತವೆ. ಸದರಿ ದಾಖಲೆಗಳಲ್ಲಿ ನನ್ನ ತಂದೆ ಹೆಸರು ಅಜ್ಞಾನ ಪಾಲಕ ಅಂತಾ ದಾಖಲಿತ್ತು ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ಸದರಿ ಅಜ್ಞಾನ ಪಾಲಕ ಅಂತಾ ತೆಗೆದು ನನ್ನ ಹೆಸರಿಗೆ ಆಸ್ತಿ ಮಾಡಿದರು. ಎಷ್ಟನೇ ಇಸ್ವಿಯಲ್ಲಿ ಮಾಡಿದರು ಎಂದರೆ ನನಗೆ ಇಸ್ವಿ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಹೆಸರಿಗೆ ಎಷ್ಟನೇ ಇಸ್ವಿಯಲ್ಲಿ ಆಸ್ತಿ ಮಾಡಿದರು ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಬರೆಸಿದ್ದೇನೆ. ಎಷ್ಟನೇ ಇಸ್ವಿ ಅಂತಾ ಬರೆಸಿದ್ದೀರಾ ಎಂದರೆ ನನಗೆ ಈಗ ನೆನಪಿಲ್ಲ. ನನಗೆ 18 ವರ್ಷ ಆದ ತಕ್ಷಣ ನನ್ನ ತಂದೆಗೆ ಗೊತ್ತಿಲ್ಲದೇ ನಾನೇ ಸ್ವತ ಅರ್ಜಿ ಕೊಟ್ಟು ನನ್ನ ತಂದೆ ಹಸೆರು ಕಡಿಮೆ ಮಾಡಿಸಿ ಸೇರಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ನನ್ನ ತಂದೆ ಯಾವುದೇ ವರದಿ ಕೊಟ್ಟಿಲ್ಲ, ನಾನು

ನನ್ನ ತಂದೆ ಮತ್ತು ಕುಟುಂಬ ಕೂಡಿ ಇರುವುದರಿಂದ ದುರುಪಯೊಗ ಪಡೆದುಕೊಂಡು ಅರ್ಜಿ ಕೊಟ್ಟು ನನ್ನ ಹೆಸರು ಹಚ್ಚಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 1 ಆಸ್ತಿ ನನ್ನ ತಾಯಿಗೆ ಜೀವನಾಂಶಕ್ಕಾಗಿ ಕಾಯ್ದಿರಿಸಿದ್ದರು ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸೇರಿ ಸದರಿ ನನ್ನ ತಾಯಿಗೆ ಜೀವನಾಂಶಕ್ಕಾಗಿ ಕೊಟ್ಟ ಹೊಲ ಅವಳಿಂದ ಕಸಿದುಕೊಂಡಿರುತ್ತೇವೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು 5 ಲಕ್ಷ ಹಣ ನನ್ನ ತಾಯಿ ಹೆಸರಿನಲ್ಲಿ ಜೀವನಾಂಶ ಕುರಿತು ಇಟ್ಟಿದ್ದೇವು ಎಂದು ಸ್ವತ ನುಡಿದಿರುತ್ತಾರೆ. ಯಾವ ಬ್ಯಾಂಕನಲ್ಲಿ ಹಣ ಇಟ್ಟಿದ್ರಾ ಎಂದರೆ ಬ್ಯಾಂಕನಲ್ಲಿ ಇಟ್ಟಿರಲ್ಲಿಲ್ಲ 5 ಲಕ್ಷ ರೂಪಾಯಿ ಕೊಟ್ಟು ಹೊಲ ಹಿಡಿದಿದ್ದೇವು, ಸದರಿ ಹೊಲ ನನ್ನ ತಾಯಿ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಈ ಕುರಿತು ಲಿಖಿತ ದಾಖಲೆ ಇದೆಯಾ ಎಂದರೆ ನನ್ನ ತಾಯಿ ಹತ್ತಿರ ಇರಬಹುದು ಎಂದು ನುಡಿದಿರುತ್ತಾರೆ. ನಾನು ಹೇಳುತ್ತಿರುವಂತೆ ನಾನಾಗಲಿ ಮತ್ತು ನನ್ನ ತಂದೆ ಆಗಲಿ ಯಾವುದೇ ಹೊಲ ಬಡ್ಡಿಯಿಂದ ಹಾಕಿಕೊಂಡು ನನ್ನ ತಾಯಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ಮೇಲೆ ಮತ್ತು 2 ನೇ ಪ್ರತಿವಾದಿ ವಿರುದ್ದ ಬೈಲಹೊಂಗಲ ಜೆ ಎಮ ಎಪ ಸಿ ಯಲ್ಲಿ ಜೀವನಾಂಶ ಕೊರಿ ಅರ್ಜಿ ಹಾಕ್ದಿರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು 3 ಸಾವಿರ ಮತ್ತು 2 ನೇ ಪ್ರತಿವಾದಿ ರೂ. 2800/- ನನ್ನ ತಾಯಿಗೆ ಕೊಡಬೇಕು ಎಂದು ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ಜೀವನಾಂಶ ಹಣವನ್ನು ನಾನು ನನ್ನ ಮೇಲೆ ವಾರೆಂಟ

O.S. NO. 161/2023

DW – 1 .

Dated 20–01–2026.

ಇದ್ದರು ಸಹ ನನ್ನ ತಾಯಿಗೆ ಕೊಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಮ್ಮ 2 ನೇ ಪ್ರತಿವಾದಿ ದಾವಾ ಅನುಸೂಚಿ ಆಸ್ತಿ ಅನುಕ್ರಮ ನಂ. 1 ಆಸ್ತಿ ನಮ್ಮ ತಾಯಿಯಿಂದ ಕಸಿದು ಕೊಂಡು ಸದರಿ ಹೊಲದಲ್ಲಿ ಸಾಗುವಳಿ ಮಾಡಲು ಟ್ರಾಕ್ಟರ ಹಚ್ಚಿದಾಗ ನನ್ನ ತಾಯಿ ನನ್ನ ವಿರುದ್ಧ ಪೊಲಿಸ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸರಿ. ಸದರಿ ಕ್ರಿಮಿನಲ ಮೊಕ್ಕದ್ದಮೆ ಈಗು ಚಾಲ್ತಿ ಇದೆ ಎಂದರೆ ಸರಿ. ನನ್ನ ತಾಯಿಗೆ ಮತ್ತು ಸಹೊದರಿಯರಿಗೆ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಕೊಡದೇ ಅವರಿಗೆ ತೊಂದರೆ ಕೊಡುತ್ತಾ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಎಲ್ಲವು ನಮ್ಮ ಒಟ್ಟು ಕುಟುಂಬಂದ ಆಸ್ತಿ ಇದ್ದು ಅವುಗಳಲ್ಲಿ ವಾದಿಯರಿಗೆ ತಲಾ 3/5 ಮತ್ತು ನನಗೆ ಮತ್ತು 2 ನೇ ಪ್ರತಿವಾದಿ 1/5 ಹಿಸ್ಸೆ ಇದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.